

ಎಡದಿಂದ ಬಲಕ್ಕೆ

1.ಸಾಲ ತಂದು ಮಾಡಿದ ಕೃತ್ಯ; ಅದಕ್ಕೇ ಹೀಗೆ ಅಲಂಕರಿಸಲ್ಪಟ್ಟಿದೆ 4
3. ಪೆಕರನಿಗೂ ಸಿಕ್ಕಿತು ನೋಡಿ ಭಾರೀ ಹೊಗಳಿಕೆ 3
7. ಆಕೆಯ ರಮಣನ ಭುಜದ ಮೇಲೆ ಹತ್ತು ಕಿಲೋ ತೂಕ 4
8. ಶಿಸ್ತಿಲ್ಲದ ಉದಾರ ನೀತಿಗೆ ತೀವ್ರ ಪ್ರತಿಭಟನೆ 3
9. ಇಲ್ಲಿ ಎಲ್ಲರ ಸಂಕಟಕ್ಕೂ ಕಾರಣ ಈ ಬಿಸಾಕು ವಸ್ತು ರಾಶಿ 2
12. ಚೋರರಿಗೆ ತಿಳಿಯಲಿಲ್ಲ, ಈ ತಿನಿಸುಗಳ ಸವಿ 2
14. ಒಳ್ಳೆಯದೇ ಆರಂಭ ಹೌದು. ಆದರೆ ತುಂಬ ತಡವಾಯಿತು 3
15. ಸೂರ್ಯನನ್ನೇ ನುಂಗುವ ಗ್ರಹ; ನಿತ್ಯ ಅದಕ್ಕೊಂದು ಸಮಯ. ಏನೀ ಮೂಢನಂಬಿಕೆ? 4
17. ಕಪ್ಪೆಯನ್ನು ಗಪ್ಪನೆ ಹಿಡಿಯಿತು ನೋಡಿ ಸರ್ಪ 3
18. ನಾಗರಾಜನ ಜೊತೆಗೆ ಇರುವಾತನದು ಪೃಥ್ವಿಗೇ ಒಡೆಯನ ಹೆಸರು 4

ಮೇಲಿನಿಂದ ಕೆಳಕ್ಕೆ

1. ಶಾಖ ನೀಡುವ ಕೆಲಸ ಇನ್ನು ಬೇಡ 2
2. ಕಾರ್ಪಣ್ಯ ಪ್ರದರ್ಶಿಸುತ್ತಿರುವವ ಒಬ್ಬ ಮಹಾ ಜಿಪುಣ 3
4. ಯಾರಿಂದಲೋ ದಾನ ಬಂದಿದ್ದು ಈ ಗೌರವ ಸಂಭಾವನೆ 4
5. ಮರುಕಳಿಸುವ ಕಾಯಿಲೆ ಬಹಳ ಅಪಾಯಕರ 3
6. ಆ ಊರಿನಲ್ಲಿ ಗಾಳಿ ಸುದ್ದಿ ಹರಡುವವರ ಸಂಖ್ಯೆ ಹಲವು ಹತ್ತು ನೂರು 4
10. ಸಂಬಳ ಪಡೆವ ಎಲ್ಲರಿಗೂ ಹೆಚ್ಚು ಕಡಿಮೆ ಇಲ್ಲದ ಒಂದೇ ಶಕ್ತಿ 4
11. ಅವರು ಮಾಡುವ ಚಿನ್ನದ ಕೆಲಸ ನಿರಂತರ 4
13. ಚೂರಾಯಿತು ಎನ್ನುವಂತೆಯೇ ಇಲ್ಲ; ಅದೊಂದು ಶಾಶ್ವತ ಜೀವಿ! 3
16. ಕೇಳುಗರ ಗುಂಪುಗಳ ನಡುವೆ ಆರಂಭವಾಯಿತು ಭಾರೀ ಹೋರಾಟ 3
17. ಪಾರ್ಥನಿಗೆ ಶ್ರೀ ಕೃಷ್ಣ ತೋರಿದ್ದು ಇಂಥದೇ ಮಾರ್ಗ 2

26–01–2023 ಉತ್ತರಗಳು

ಎಡದಿಂದ ಬಲಕ್ಕೆ

1. ಅಭಾವ 3. ಪರೋಕ್ಷ 4. ದಶಕ 6. ಪರಿಕರ 7. ಮಾನಧನ 9. ನವನೀತ 11. ಅಪಕಾರ 15. ವಸನ 16. ರುಧಿರ 17. ಕಠಿಣ

ಮೇಲಿನಿಂದ ಕೆಳಕ್ಕೆ

1. ಅಕ್ಷಮ್ಯ 2. ವದನ 3. ಪದಕ 5. ಕವನ 6. ಪತನ 8. ನಕಾರ 10. ನೀರವ 12. ಪದರ 13. ಕನಕ 14. ವರುಣ

ಪ್ರಶ್ನಾಂಕಣ

ಚಂದ್ರಯಾನಕ್ಕೆ ಏಕಿಷ್ಟು ನೂಕುನುಗ್ಗಲು?

ಈ ವರ್ಷ (2023) ಚಂದ್ರಯಾನದ 'ಸುಗ್ಗಿಯ ಕಾಲ' ಆಗಲಿದೆ. ಏಕೆಂದರೆ ಈ ವರ್ಷ ಒಂದಲ್ಲ, ಎರಡಲ್ಲ, ಒಟ್ಟು ಐದು ರಾಷ್ಟ್ರಗಳು ಚಂದ್ರನನ್ನು ಪರಿಭ್ರಮಿಸುವ 'ಆರ್ಬಿಟರ್'ಗಳನ್ನು, ಚಂದ್ರನ ನೆಲದ ಮೇಲಿಳಿವ 'ಲ್ಯಾಂಡರ್'ಗಳನ್ನು ಅಥವಾ ಚಂದ್ರನ ಮೇಲಿಳಿದು ಓಡಾಡುವ 'ರೋವರ್'ಗಳನ್ನು ಕಳುಹಿಸಲು ಉದ್ಯುಕ್ತವಾಗಿವೆ. ವಾಸ್ತವ ಏನೆಂದರೆ, ಯಶಸ್ವೀ ಅಪೋಲೋ ಕಾರ್ಯಕ್ರಮದ ನಂತರ ಚಂದ್ರಯಾನದ ಎರಡನೆಯ ಅಲೆಯಾಗಿ ಯು.ಎಸ್.ಎ ಕೆಲವೇ ವಾರಗಳ ಹಿಂದೆ ಯಶಸ್ವಿಯಾಗಿ ಆರಂಭಿಸಿದ 'ಆರ್ಟೆಮಿಸ್ ಕಾರ್ಯಕ್ರಮ'ದ ನಂತರವಂತೂ ಚಂದ್ರನನ್ನು ಸಂದರ್ಶಿಸುವ, ಮುಟ್ಟುವ ಅಥವಾ ಮೆಟ್ಟುವ ಮಹತ್ವಾಕಾಂಕ್ಷೆ ತಾಂತ್ರಿಕ ಪರಿಣತಿಯನ್ನು ಪಡೆದಿರುವ ಮತ್ತು ಶ್ರೀಮಂತವಾಗಿರುವ ರಾಷ್ಟ್ರಗಳಿಗೆ ತೀವ್ರವಾಗಿ ವ್ಯಾಪಿಸಿದೆ.

ಈ ವರ್ಷ ಹಾಗೆ ಬಹುಪಾಲು ಸಜ್ಜಾಗಿ ನಿಂತಿರುವ ರಾಷ್ಟ್ರಗಳು ಮತ್ತು ಅವುಗಳ ಚಂದ್ರಯಾನದ ಯೋಜನೆಗಳು ಇವು: ಭಾರತ ದೇಶದ 'ಚಂದ್ರಯಾನ್2'; ರಷ್ಯಾದ 'ಲೂನಾ25'; ಜಪಾನ್ ದೇಶದ 'ಸ್ಲಿಮ್' (Smart Lander for Investigating the Moon); ದಕ್ಷಿಣ ಕೊರಿಯಾ ದೇಶದ 'ಕೆಪಿಎಲ್ಒ' (Korean Path finder and Lunar Mission) ಮತ್ತು ಯು.ಎ.ಇ ಯ 'ರಷೀದ್'.

ಈ ರಾಷ್ಟ್ರಗಳೇ ಅಲ್ಲದೆ ಹಲವಾರು ಖಾಸಗಿ ಬಾಹ್ಯಾಕಾಶ ಯಾನ ಸಂಸ್ಥೆಗಳೂ ವಿವಿಧ ಉದ್ದೇಶಗಳ ಚಂದ್ರಯಾನದ ಯೋಜನೆಗಳನ್ನು ರೂಪಿಸುತ್ತಿವೆ. ಸ್ಪೇಸ್ ಎಕ್ಸ್, ಆಸ್ಟ್ರೋಬಯೋಟಿಕ್, ಲೋನ್ ಸ್ಟಾರ್, ಇಂಟ್ಯೂಟಿವ್ ಮೆಶೀನ್ಸ್ , ಆರ್ಬಿಟ್ ಬಿಯಾಂಡ್, ಐಸ್ಪೇಸ್, ಸ್ಪೇಸ್ ಬಿಟ್ ಇತ್ಯಾದಿ ಸಂಸ್ಥೆಗಳು ಇನ್ನೊಂದು ದಶಕದಲ್ಲಿ ವಿವಿಧ ರಾಷ್ಟ್ರಗಳ ಹೇರಳ ಪ್ರಯಾಣಗಳೇ ಅಲ್ಲದೆ ಕನಿಷ್ಠ 70 ಚಂದ್ರಯಾನಗಳನ್ನು ನಡೆಸಲಿವೆ!

ಚಂದ್ರನಲ್ಲಿ ಏಕಿಷ್ಟು ತೀವ್ರ ಆಸಕ್ತಿ? ಚಂದ್ರಯಾನಕ್ಕೆ ಇಷ್ಟೊಂದು ನೂಕುನುಗ್ಗಲು ಏಕೆ?

ಅದಕ್ಕೆ ಕಾರಣಗಳು ಸ್ಪಷ್ಟ. ಚಂದ್ರ, ವಿಶ್ವದಲ್ಲಿ ನಮಗೆ ಅತ್ಯಂತ ಸನಿಹದ ವ್ಯೋಮ ಕಾಯ (ನಮ್ಮಿಂದ ಚಂದ್ರನಿಗಿರುವ ಸರಾಸರಿ ದೂರ 3,84,000 ಕಿ.ಮೀ). ಹಾಗಾಗಿ ಸೌರವ್ಯೂಹದ ಇತರ ಯಾವುದೇ ಕಾಯವನ್ನಾಗಲೀ, ಅಲ್ಲಿಂದಲೂ ಹೊರಗಿನ ಬೇರಾವುದೇ ಕಾಯವನ್ನೇ ಆಗಲೀ ತಲುಪಲು ಬೇಕಾದ ತಾಂತ್ರಿಕ ಪರಿಣತಿಯನ್ನು ಗಳಿಸಲು ಚಂದ್ರಯಾನ (ವಿಮಾನ ಯಾನದಂತೆ) ಸಂಪೂರ್ಣ ಕರಗತವಾಗಲೇಬೇಕು. ಚಂದ್ರಯಾನವನ್ನು ಯಶಸ್ವಿಯಾಗಿ ನಡೆಸುವುದು ಪ್ರತಿ ರಾಷ್ಟ್ರಕ್ಕೂ ಹೆಮ್ಮೆ ತರುವ ಮತ್ತು ತಮ್ಮ ಅದ್ಭುತ ತಾಂತ್ರಿಕ ಪರಿಣತಿಯನ್ನು ಜಗತ್ತಿಗೇ ಪ್ರದರ್ಶಿಸುವ ಒಂದು ಅತ್ಯುತ್ತಮ ಮಾರ್ಗ.

ಚಂದ್ರನಲ್ಲಿರುವ ನಿಧಿ ನಿಕ್ಷೇಪಗಳ ಪತ್ತೆ, ಚಂದ್ರನಿಂದ ಪಡೆಯಬಹುದಾದ ವಾಣಿಜ್ಯ ಪ್ರಯೋಜನಗಳ ಶೋಧ, ಚಂದ್ರನಲ್ಲಿ ಸುರಕ್ಷಿತ ಮಾನವ ವಸಾಹತುಗಳ ಸ್ಥಾಪನೆ... ಇಂಥವೂ ಚಂದ್ರಯಾನದ ಉದ್ದೇಶಗಳೇ ಆಗಿವೆ. ಇವನ್ನೆಲ್ಲ ಆದಷ್ಟೂ ಬೇಗ ಮೊದಲಿಗೆ ಕೈಗೂಡಿಸಿಕೊಳ್ಳುವ ಆಶಯವೇ ಪ್ರಸ್ತುತದ ಚಂದ್ರಯಾನದ ನೂಕುನುಗ್ಗಲುಗಳಿಗೆ ಕಾರಣ.

■ ಎನ್. ವಾಸುದೇವ್